# ಜನಾರೋಗ್ಯ ಆಂದೋಲನದ ಕಿರು ಪರಿಚಯ

**ಹಿನ್ನೆಲೆ :** 1978ರಲ್ಲಿ ಅಂದಿನ ಸೋವಿಯತ್ ರಷ್ಯಾದ ಕಜಾಕಿಸ್ತಾನ್ ದೇಶದ ಅಲ್ಮಾ-ಆಟ ಎಂಬ ಜಾಗದಲ್ಲಿ 134 ದೇಶಗಳು "ಸರ್ವರಿಗೂ ಆರೋಗ್ಯ - 2000ದೊತ್ತಿಗೆ" ಎಂಬ ಘೋಷಣೆಯನ್ನು ಮಾಡಿದವು. 'ಪ್ರಾಥಮಿಕ ಆರೋಗ್ಯ ಪಾಲನೆ'ಯ ಮಾರ್ಗವನ್ನು ಹಮ್ಮಿಕೊಂಡು, ಸರ್ವರಿಗೂ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಸುಸ್ಥಿತಿಯನ್ನು ಪಡೆಯುವಂತಹ ಪರಿಸರವನ್ನು ನಿರ್ಮಿಸುತ್ತೇವೆಯೆಂದೂ ಪ್ರಮಾಣ ಮಾಡಿದರು.

**ಪ್ರಾರಂಭ :** ಆದರೆ, 1990ರ ನಂತರ ಭಾರತ ಮತ್ತು ಜಗತ್ತಿನಾದ್ಯಂತ ರಾಷ್ಟ್ರಗಳು ಅಂಗೀಕರಿಸಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಎಂಬ ನೀತಿಯಿಂದ, ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಮತ್ತು "ಸರ್ವರಿಗೂ ಆರೋಗ್ಯ 2000ದ ವೇಳೆಗೆ" ಈ ಘೋಷಣೆಯನ್ನು ಮರೆತವು. ಅಲ್ಮಾ-ಆಟ ಘೋಷಣೆಯ ತದ್ವಿರುದ್ಧ ಮಾತೃ ಮರಣ, ಶಿಶುಮರಣ, ಅಪೌಷ್ಟಿಕತೆ, ದುರ್ಬಲ ವರ್ಗದವರ ಆರೋಗ್ಯದ ಹಕ್ಕಿನ ಉಲ್ಲಂಘನೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿತು. ಹಾಗಾಗಿ 2000ನೇ ಇಸವಿಯಲ್ಲಿ ಜಗತ್ತಿನಾದ್ಯಂತ ಚರ್ಚೆ ಮತ್ತು ಚಳುವಳಿಗಳು ಪ್ರಾರಂಭವಾಗಿ 2000ನೇ ಇಸವಿಯ ಡಿಸೆಂಬರ್ ತಿಂಗಳಲ್ಲಿ, ಬಾಂಗ್ಲಾದೇಶದ ಢಾಕಾ ನಗರದಲ್ಲಿ, 110 ದೇಶಗಳ ಪ್ರತಿನಿಧಿಗಳು ಸೇರಿ ಮೊದಲ ಅಂತರಾಷ್ಟ್ರೀಯ 'ಜನಾರೋಗ್ಯ ಸಭೆ' ಯನ್ನು ನಡೆಸಿದರು. ಆರೋಗ್ಯವು ಜನರ ಹಕ್ಕಾಗಬೇಕಾದರೆ ಚಳುವಳಿಯೇ ನಡೆಯಬೇಕು ಎಂಬ ನಿರ್ಧಾರ ಮತ್ತು ವಿಶ್ವಾಸದೊಂದಿಗೆ ಅಂತರಾಷ್ಟ್ರೀಯ ಜನಾರೋಗ್ಯ ಆಂದೋಲನ (ಪೀಪಲ್ಸ್ ಹೆಲ್ತ್ ಮೂವ್‌ಮೆಂಟ್) ಹುಟ್ಟಿಕೊಂಡಿತು. ಭಾರತದಲ್ಲಿ ಇದನ್ನು 'ಜನ ಸ್ವಾಸ್ಥ್ಯ ಅಭಿಯಾನ್' ಮತ್ತು ಕರ್ನಾಟಕದಲ್ಲಿ ಇದನ್ನು '**ಜನಾರೋಗ್ಯ ಆಂದೋಲನ-ಕರ್ನಾಟಕ**' ಎಂದು ಗುರುತಿಸಿದ್ದಾರೆ. ಈ ಚಳುವಳಿಯ ಮೂಲ ಮಂತ್ರ : "ಸರ್ವರಿಗೂ ಆರೋಗ್ಯ - ಇಂದೇ!!" - ಅರ್ಥಾತ್ ಆರೋಗ್ಯವು ಪ್ರತಿಯೊಬ್ಬರ ಮೂಲಭೂತ ಮಾನವ ಹಕ್ಕಾಗಬೇಕು.

ಸಂಪರ್ಕ ವಿಳಾಸ
JAAK Secretariat, C/o Community Health Cell
359, Srinivasa Nilaya, Koramangala, I Main, I Block,
Bangalore – 560 034
Phone : 080 - 2553 1518 Telefax: 2552 5372
E-mail : jaaksecretariat@gmail.com



# ಜನಾರೋಗ್ಯ ಆಂದೋಲನ – ಕರ್ನಾಟಕ

ಸರ್ವರಿಗೂ ಆರೋಗ್ಯ "ಇಂದೇ" ಸಿಗಬೇಕು ಎಂಬ ಗುರಿಯತ್ತ ಜನರ ಹೋರಾಟ

ಅರ್ಪಿಸುವ

# "ಆರೋಗ್ಯದ ಹಕ್ಕು"

## ಜನರ ಆರೋಗ್ಯದ ಹಕ್ಕನ್ನು ಸಾಕ್ಷಾತ್ಕರಿಸಲು ಹೊರತಂದಿರುವ ಹಾಡುಗಳು

ಪ್ರಕಾಶಕರು
ಸಮುದಾಯ ಆರೋಗ್ಯ ಕೋಶ
ನಂ.359, ಕೋರಮಂಗಲ, 1ನೇ ಮುಖ್ಯ ರಸ್ತೆ, 1ನೇ ಬಡಾವಣೆ,
ಬೆಂಗಳೂರು - 560 034.

ಆಗಸ್ಟ್ 2008

# "ಆರೋಗ್ಯದ ಹಕ್ಕು"

## ಹಾಡುಗಳು

- ಆರೋಗ್ಯದ ಹಕ್ಕು - ಸಾಹಿತ್ಯ : ಜನಾರೋಗ್ಯ ಆಂದೋಲನ
- ಜನಾರೋಗ್ಯ ಕಲಾಜಾಥ - ಗ್ಯಾರಂಟಿ ರಾಮಣ್ಣ
- ಆರೋಗ್ಯ ಕೇಂದ್ರ - ಜನಾರೋಗ್ಯ ಆಂದೋಲನ
- ಬದಲಾವಣೆ ತರೋಣ
- ಮಾರ್ಗದರ್ಶಿ -ಆಂಜನಪ್ಪ
- ರೋಗ ಬಂದಾತು ಜೋಪಾನ - ಗ್ಯಾರಂಟಿ ರಾಮಣ್ಣ
- ಹೆಚ್.ಐ.ವಿ. ಹಕ್ಕಿನ ಗೀತೆ - ಮಿಲನ
- ಒಂದು ಗೀಗಿ ಪದ - ಗ್ಯಾರಂಟಿ ರಾಮಣ್ಣ
- ಹಾಕ್ಸಮ್ಮ ಲಸಿಕೆಯಾ - ಗ್ಯಾರಂಟಿ ರಾಮಣ್ಣ
- ಆರೋಗ್ಯ ನಿನ್ನದೋ
- ಹೆಚ್.ಐ.ವಿ. ಅರಿವಿನ ಗೀತೆ - ಮಿಲನ
- ಮುಟ್ಟು ಮೈಲಿಗೆ ಅಲ್ಲ - ಕಂಪಾಲಿ ತಿಪ್ಪೇಸ್ವಾಮಿ
- ಮುತ್ತಿನಂತ ಮಾತೊಂದು
- ಎಲ್ಲಿಂದ ಬಂದೀರೆಂದು

## ಗಾಯಕರು :

ಎಂ.ಡಿಂಗ್ರಿ ನರಸಪ್ಪ, ಆಶಾಪೂರ್-ರಾಯಚೂರು, ಎಂ.ಡಿ. ಕುಮಾರಸ್ವಾಮಿ,
ಅನಸೂಯ ಮತ್ತು ಅಮುದ (ಮಿಲನ), ಅಕ್ಕಮ್ಮ (ಬಿ.ಜಿ.ವಿ.ಎಸ್.),
ಸುಮತಿ (ಸಂಗಮ) ಹಾಗೂ ಸಂಗಡಿಗರು

# 1. ಆರೋಗ್ಯದ ಹಕ್ಕು

ಜನಾರೋಗ್ಯ ಆಂದೋಲನ

ಕುಂತ ಜನಗಳೆ ನಿಂತ ಮನಗಳೆ
ಕೇಳಿರಿ ಕಥೆಯನ್ನ, ನಾವ್ ಹೇಳುವ ಕಥೆಯನ್ನ
ಆರೋಗ್ಯವು ಹಕ್ಕಾಗದೆ ಉಳಿಯುವ ವ್ಯಥೆಯನ್ನ
ಈಗಿರುವ ಸ್ಥಿತಿಯನ್ನ ॥2॥
ಆಲ್ಮಾ ಆಟಾ ಘೋಷಣೆ ಹೇಳಿತು
ಆರೋಗ್ಯ ಮಾನವ ಹಕ್ಕೆಂದು
ನಮ್ಮ ಸರ್ಕಾರ ಸಹಿ ಹಾಕಿತು
ಆರೋಗ್ಯ ಮಾನವ ಹಕ್ಕೆಂದು
ಭಾರತ ಸರ್ಕಾರ ಒಪ್ಪಿಕೊಂಡಿತು
ಆರೋಗ್ಯ ಮಾನವ ಹಕ್ಕೆಂದು ॥ಕುಂತ॥
ಖಾಸಗಿಯಲ್ಲಿ ಮಾನವ ಹಕ್ಕಿಗೆ ಜಾಗ ಎಲ್ಲಣ್ಣಾ
ಆರೋಗ್ಯವನ್ನು ಕೊಂಡುಕೊಳ್ಳುವುದು ನಮ್ಮ ಸ್ಥಿತಿಯಣ್ಣ
ದುಡ್ಡಿದ್ದವನಿಗೇ ಆರೋಗ್ಯ ಸಿಗುವುದು ಖಾಸಗಿಯಲ್ಲಣ್ಣಾ
ಆರೋಗ್ಯ ಇಂದು ಲಾಭ ನಷ್ಟದ ವ್ಯಾಪಾರವಣ್ಣಾ ॥ಕುಂತ॥
ಆರೋಗ್ಯ ಇಂದು ವ್ಯಾಪಾರವಾಗದೆ
ಎಲ್ಲಾರ್ ಹಕ್ಕಾಗ್ಬೇಕು। ಇಂದು ಎಲ್ಲರ ಹಕ್ಕಾಗ್ಬೇಕು ॥2॥
ಆರೋಗ್ಯ ಮಾನವ ಹಕ್ಕಾಗಬೇಕಾದ್ರೆ
ಸರ್ಕಾರಿ ವ್ಯವಸ್ಥೆಯೇ ಬೇಕು ॥ ಕುಂತ ॥
ತಿಳಿಯಿತು ನಮಗಿಂದು, ನಮಗಿಂದು ತಿಳಿಯಿತು
ಆರೋಗ್ಯ ಮಾನವ ಹಕ್ಕೆಂದು।
ಸರ್ಕಾರಿ ಆರೋಗ್ಯ ವ್ಯವಸ್ಥೆಯ ಸುಧಾರ್ಸಿ
ಪಡೆಯೋಣ ಆರೋಗ್ಯ ಹಕ್ಕನ್ನು।
ನಾವು ಪಡೆಯೋಣ ಆರೋಗ್ಯ ಹಕ್ಕನ್ನು !!

# 2. ಜನಾರೋಗ್ಯ ಕಲಾಜಾಥ

ಗ್ಯಾರಂಟಿ ರಾಮಣ್ಣ

ಜನಾರೋಗ್ಯ ಕಲಾಜಾಥಾ ಬಂತು ನಮ್ಮೂರಿಗೆ
ಆರೋಗ್ಯದ ಸಂದೇಶ ತಂತು ಎಲ್ಲ ಜನರಿಗೆ ॥2॥
ಬನ್ನಿರಿ ..... ಅಕ್ಕ ಬನ್ನಿರಿ, ಬನ್ನಿರಿ..... ಅಣ್ಣ ಬನ್ನಿರಿ......

ಕರ್ನಾಟಕ ರಾಜ್ಯ ಜನಾರೋಗ್ಯ ಆಂದೋಲನದಿ
ವಿವಿಧ ಸಂಘಟನೆಗಳು ಸೇರಿವೆ ಜೊತೆಯಲಿ
ಸಮಗ್ರ ಆರೋಗ್ಯ, ಅನುಷ್ಠಾನಗೊಳಿಸಬೇಕು
ಇದಕಾಗಿ ನಿಮ್ಮೆಲ್ಲರ ಸಹಕಾರ ಬೇಕು
ಆರೋಗ್ಯದ ಹೋರಾಟಕೆ ಮುನ್ನುಗ್ಗಬೇಕು ॥ಜ॥

ಕುಡಿವ ನೀರು ತಿನ್ನೋ ಅನ್ನ ಎಲ್ಲಿರಿಗೂ ಬೇಕು
ಸುತ್ತಮುತ್ತ ಪರಿಸರವು ಸ್ವಚ್ಛವಾಗಿರಬೇಕು
ನಮ್ಮ ಆರೋಗ್ಯ, ಅದು ನಮ್ಮ ಕೈಯಲ್ಲಿ
ಈ ಅರಿವಿನಾ ಪ್ರಜ್ಞೆ, ಬರಬೇಕು ನಮ್ಮಲ್ಲಿ
ಇದ ತಿಳಿದಾಗಲೇ ಸುಧಾರಣೆ ಈ ದೇಶದಲ್ಲಿ ॥ಜ॥

ಅಣ್ಣ ತಮ್ಮ ಅಕ್ಕ ತಂಗಿ ಎಲ್ಲ ಒಂದುಗೂಡಿರಿ
ಜನಾರೋಗ್ಯಕ್ಕಾಗಿ ಎಲ್ಲ ಮುನ್ನುಗ್ಗಿ ಸಾಗಿರಿ
ಎಲ್ಲರಿಗೂ ಆರೋಗ್ಯ, ನಮ್ಮೆಲ್ಲರ ಸೌಭಾಗ್ಯ
ಸುಖ ಜೀವನ ಎಲ್ಲರಾ ಬದುಕಿನಾ ಭಾಗ ॥ಜ॥

## 3. ಆರೋಗ್ಯ ಕೇಂದ್ರ

-ಜನಾರೋಗ್ಯ ಆಂದೋಲನ

78ರಲ್ಲಿ ಆಲ್ಮಾ ಆಟಾ ಘೋಷಣೆ ಬಂತು
2000ದಲ್ಲಿ ಎಲ್ಲರಿಗೂ ಆರೋಗ್ಯ ಸಿಗಬೇಕೆಂತು
ಪ್ರಾಥಮಿಕ ಆರೋಗ್ಯ ಪಾಲನೆ ಇದರ ಅಸ್ತ್ರವಾಗಿತ್ತು
ಅದಕ್ಕಾಗಿ ಬಂತು ಪ್ರಾಥಮಿಕ ಆರೋಗ್ಯ ಕೇಂದ್ರ॥

ಆರೋಗ್ಯವೆಂದರೆ ರೋಗ ನಿವಾರಣೆಯಲ್ಲ
ಬರೀ ರೋಗ ನಿವಾರಣೆಯೊಂದೇ ಅಲ್ಲ
ಆರೋಗ್ಯವೆಂದರೆ ಪೌಷ್ಟಿಕ ಆಹಾರ
ಶುದ್ಧನೀರು, ನೈರ್ಮಲ್ಯ!!

ಆರೋಗ್ಯ ಕೇಂದ್ರವು ದವಾಖಾನೆಯಲ್ಲ
ಬರೀ ದವಾಖಾನೆಯಲ್ಲಾ
ಬರೀ ಸೂಜಿ, ಮಾತ್ರೆ, ಮದ್ದು ಕೊಡುವುದಲ್ಲ
ಆರೋಗ್ಯ ಕೇಂದ್ರವು ಸಮಗ್ರ ಆರೋಗ್ಯ ಪಾಲನೆಯಾ ಕೇಂದ್ರ ॥ಆ॥

ಆರೋಗ್ಯ ಕೇಂದ್ರದ ಜವಾಬ್ದಾರಿಗಳ ತಿಳಿಯಿರಿ ನೀವೆಲ್ಲಾ
ಆಹಾ ! ತಿಳಿಯಿರಿ ನೀವೆಲ್ಲಾ
1. ಆಹಾರ ಮತ್ತು ಪೋಷಕಾಂಶಗಳು
2. ಶುದ್ಧ ನೀರು, ಶೌಚಾಲಯದ ವ್ಯವಸ್ಥೆ
3. ಸಾಂಕ್ರಾಮಿಕ ರೋಗಗಳ ತಡೆ
4. ಆರೋಗ್ಯ ಶಿಕ್ಷಣ
5. ಲಸಿಕಾ ಕಾರ್ಯಕ್ರಮ
6. ತಾಯಿ ಮಗುವಿನ ಆರೋಗ್ಯ
7. ಸಾಮಾನ್ಯ ರೋಗ ಮತ್ತು ಗಾಯಗಳು
8. ಅವಶ್ಯಕ ಔಷಧಗಳ ವಿತರಣೆ ॥ಆ॥

ಆರೋಗ್ಯ ಕೇಂದ್ರ ಗುರಿಗಳನ್ನು ತಿಳಿಯಿರಿ ನೀವೆಲ್ಲಾ
ಆಹಾ ! ತಿಳಿಯಿರಿ ನೀವೆಲ್ಲಾ
ರೋಗಗಳೇ ಬರದಂತೆ ತಡೆಗಟ್ಟುವುದು
ಆರೋಗ್ಯವಾಗಿರಲು ಮಾಹಿತಿ ಕೊಡುವುದು
ಬಂದ ರೋಗಗಳ ನಿವಾರಿಸುವುದು ॥ಆರೋಗ್ಯ॥

## 4. ಬದಲಾವಣೆ ತರೋಣ

ಎಂ.ಡಿಂಗ್ರಿ ನರಸಪ್ಪ, ಆಶಾಪೂರ್

ಬದಲಾವ್ಣೆ ತರೋಣ
ಆರೋಗ್ಯ ಕೇಂದ್ರದಲ್ಲಿ॥ 2॥

ಸೂಜಿ ಇದ್ರೆ ದವಾ ಇಲ್ಲ, ದವಾ ಇದ್ರೆ ಸೂಜಿ ಇಲ್ಲ,
ಅರೆ ಸೂಜಿ ದವಾ ಇದ್ರೆ, ಅದು ಚುಚ್ಚೋ ಡಾಕ್ಟರ್ ಇಲ್ಲ ॥
ಹಾಲಿದ್ರೆ ಬ್ರೆಡ್ಡು ಇಲ್ಲ, ಬ್ರೆಡ್ಡು ಇದ್ರೆ ಹಾಲು ಇಲ್ಲ
ಅರೆ ಬ್ರೆಡ್ಡು, ಹಾಲು ಇದ್ರೆ ಅದು ಕೊಡೋ ನರ್ಸ್ ಇಲ್ಲ
ಬ್ರೆಡ್ಡು, ಹಾಲು, ಸೂಜಿ, ಮದ್ದು ಡಾಕ್ಟರ್, ನರ್ಸ್
ಇದೆಲ್ಲವನ್ನು ಸುಧಾರಿಸಲು ಹೋರಾಡಲು ಮುಂದೆ ಬನ್ನಿ ॥ಬದಲಾವ್ಣೆ॥

ಅರೆ ಕಷ್ಟಪಟ್ಟು ರೈತ ಹೊಲದಲ್ಲಿ ದುಡೀವಾಗ
ನೇಗಿಲಿಡಿದು ಉಳುವಾಗ ಮುಳ್ಳೊಂದು ಚುಚ್ಚಿತಾಗ
ಕಾಲೆಲ್ಲಾ ಬಾವುಕೊಂಡು, ಕೀವೆಲ್ಲಾ ತುಂಬಿಕೊಂಡು
ಕುಂಟುತ್ತಾ ಕುಂಟುತ್ತಾ ಆರೋಗ್ಯ ಕೇಂದ್ರಕ್ಕೆ ಬಂದ್ರೆ
ಸಾಲಾಮು ಸಾರ್ ಅಂದ್ರೆ, ಮುಲಾಮು ಬರೆದು ಕೊಟ್ಟು
ಅಂಗೆಂಗೆ ಸಾರ್ ಅಂದ್ರೆ, ಕ್ಲಿನಿಕ್‌ಗೆ ಬಾರೋ ಅಂದ
ಎಲ್ಲಾದರಲ್ಲೂ ದೊಡ್ಡ ಡಾಕ್ಟರ್ ಆಪರೇಷನ್ ರೂಂಗೆ ತಗೊಂಡೋಗಿ
ಕತ್ತಿ ತೋರ್ಸಿ ಕಳ್ ನನ್ ಮಗ ಸಾವಿರ ರೂಪಾಯಿ ಕಸಕೊಂಡ ॥ಬದಲಾವ್ಣೆ॥

ನೀರ್ ತೊಟ್ಟಿ ತೊಳೆಸಲಿಲ್ಲ, ಸೊಳ್ಳೆ ಮೊಟ್ಟೆ ಇಟ್ಟಿತ್ತಲ್ಲ
ಸೊಳ್ಳೆಯು ಕಚ್ಚಿತಿಲ್ಲಿ, ಚಿಕುನ್‌ಗುನ್ಯ ಬಂದಿತಲ್ಲಿ
ಸೊಳ್ಳೆಯ ನಿಯಂತ್ರಿಸಿಲ್ಲ, ಚಿಕುನ್‌ಗುನ್ಯ ಹರಡಿತಲ್ಲ
ಆರೋಗ್ಯ ಕೇಂದ್ರದವರು ತಲೆ ಕೆಡೆಸಿಕೊಳ್ಳಲಿಲ್ಲ
ಸರ್ಕಾರಿ ಔಷಧಿಗಳು ಖಾಸಗೀಗೆ ಸೇರ್ದವೆಲ್ಲಾ
ತೊಟ್ಟಿ ತೊಳಿಸ್ಲು, ಸೊಳ್ಳೆ ಓಡಿಸ್ಲು, ಔಷಧಿ ಕೊಡಿಸ್ಲು
ಇದೆಲ್ಲವನ್ನು ಸರಿಪಡಿಸಲು ಹೋರಾಡಲು ಮುಂದೆ ಬನ್ನಿ
ಜನಾರೋಗ್ಯ ಆಂದೋಲನದ ಹೋರಾಟಕೆ ಮುಂದೆ ಬನ್ನಿ ॥ಬದಲಾವ್ಣೆ॥

## 5. ಮಾರ್ಗದರ್ಶಿ

-ಆಂಜನಪ್ಪ

ಮಾರ್ಗದರ್ಶಿಯಾಗಿ ನೀನು ಬಾರಮ್ಮ। ನಮ್ಮಮ್ಮಾ।
ಜನಾರೋಗ್ಯದ ಗುರಿಯನು ತಿಳಿಸಲು ನೀನು ಬಾರಮ್ಮ ||ಪ||

ನಮ್ಮ ಹಳ್ಳಿಯ ಮುಗ್ಧ ಜನರಿಗೆ
ಖಾಸಗೀಕರಣದ ವಿಷಯವ ತಿಳಿಸಲು
ನಮ್ಮ ಹಳ್ಳಿಯ ಮುಗ್ಧ ಜನರಿಗೆ
ಜಾಗತೀಕರಣದ ನೀತಿಯ ತಿಳಿಸಲು। ನಮ್ಮಮ್ಮಾ। ||ಪ||

ಮೂಢನಂಬಿಕೆಯ ಬಲೆಯಲಿ ಇರುವ
ನಮ್ಮ ಹಳ್ಳಿಯ ಮುಗ್ಧ ಜನರಿಗೆ
ವಿಜ್ಞಾನದ ನೀ ಅರಿವನು ತಿಳಿಸಿ ಜ್ಞಾನದ ಬೆಳಕಿನ ದಾರಿಯ ತೋರಿಸು ||ಪ||
ರಾಜಕಾರಣಿಗಳ ದಬ್ಬಾಳಿಕೆಗೆ
ಒಳಗಾಗುತಲಿಹರು ನಮ್ಮೀ ಜನರು
ಮೋಸ ವಂಚನೆಯಿಂದ ಬರಲು ಅವರಿಗೆ ನೀನು ಜ್ಞಾನವ ತೋರಿಸು ||ಪ||

ಹೆಚ್ಚಿನ ಜೀವವ ನುಂಗುತಲಿರುವ
ದುಷ್ಟ ಜನರ ನೀ ಮೆಟ್ಟಿ ನಿಲ್ಲಲು
ಪಣತೊಟ್ಟು ಬಾರೆ, ಪಣತೊಟ್ಟು ಬಾರೆ ಪಣ ತೊಟ್ಟು ಬಾರಮ್ಮ
ಮಾರ್ಗದರ್ಶಿಯಾಗಿ ನೀನು ಬಾರಮ್ಮ
ಜನಾರೋಗ್ಯದ ಗುರಿಯನು ತಿಳಿಸಲು ನೀನು ಬಾರಮ್ಮ ||ಪ||

ಅಲ್ಮಾ ಆಟದ ಘೋಷಣೆಯಂತೆ
ಎಲ್ಲರಿಗೂ ಆರೋಗ್ಯ ಬೇಕೆಂದು
ಹೋರಾಟ ಮಾಡುವ ಜನರನು ಎಬ್ಬಿಸು ! ನಮ್ಮಮ್ಮಾ !

## 6. ರೋಗ ಬಂದಾತು ಜೋಪಾನ

ಗ್ಯಾರಂಟಿ ರಾಮಣ್ಣ

ರೋಗಾ ಬಂದಾತು ಜೋಪಾನ
ಓ ರಂಗಣ್ಣಾ.... ಓ ತಿಮ್ಮಣ್ಣಾ.... ಓ ನಿಂಗಣ್ಣಾ
ರೋಗಾ ಬಂದಾತು ಜೋಪಾನ ||ಪ||

ಮನೆಯ ಒಳಗೆ ಕಿಟಕಿ ಇಲ್ಲ, ಗಾಳಿ ಬೆಳಕು ಬೀಳಂಗಿಲ್ಲ
ವಾಸದ ಮನೆಯ ಕೊಟ್ಟಿಗೆ ಮಾಡಿ ಸೊಳ್ಳೆ ತಿಗಣೆ ಎಲ್ಲಾ ಸೇರಿ
ತಿನ್ನುವ ಅನ್ನಕೆ ಸೇರಿಕೊಂಡು
ನಿನಗೇ ಕಾಯಿಲೆ ತರ್ತಾವಲ್ಲೋ ||ಪ||

ಹೊಲದ ಕೆಲಸ ಮಾಡುತ್ತೀಯ
ಕೈಯ್ಯಾ ಕೆಸರು ಮಾಡ್ಕೋತೀಯಾ
ಹೊತ್ತು ಮೀರಿ ಮನೆಗೆ ಬಂದು
ಕೈಯಾ ತೊಳೆಯದೆ ಉಣ್ಣುತ್ತೀಯಾ
ಮೈಕೈ ಗಾಯ ಆದ್ರೆ ನೀನು ಅಮ್ಮ ಅಂತ ಪೂಜಿಸ್ತೀಯಾ
ಬಾಣ್ತಿ ಹೆಂಗಸ್ರು ಬಿಂಕ ಮಾಡಿ ||ಪ||

ಕಾಲರಾ ರೋಗ ಬಂದ್ರೆ ನೀನು
ಕಂಡ್ ಕಂಡ್ ದೇವರಿಗೆ ಹರಕೆ ಹೊತ್ತೆ
ಡಾಕ್ಟರಿಗೆ ತೋರ್ಸಿ ಕೇಳೋದ ಬಿಟ್ಟು
ಮೂಢನಂಬಿಕೆಯಿಂದ ಸಾಯುತ್ತೀಯಾ
ಕಾಯಿಸಿ ಆರಿಸಿದ ನೀರು ಕುಡ್ದು
ಕಾಯ್ಲೆ ಕಳೆಯೋದ್ ಮರೆಯುತ್ತೀಯ ||ಪ||

ಊರ ಸುತ್ತಾ ಸ್ವಚ್ಛ ಬೇಕು
ಮನೆ ಮುಂದೆ ಗಿಡವ ನೆಡಲೇಬೇಕು
ಶುದ್ಧ ನೀರು ಕುಡಿಯಬೇಕು
ವಿದ್ಯೆ ಬುದ್ಧಿ ಕಲಿಯಬೇಕು
ನಿಮ್ಮ ಆರೋಗ್ಯ ನೀವೇ ನೋಡ್‌ಕೊಂಡ್ ||ಪ||
ಆನಂದದಿಂದ ಬಾಳಬೇಕು
ಅದರಿಂದ ರೋಗ ಬರದಂತೆ ಜೋಪಾನ

## 7. ಎಚ್.ಐ.ವಿ. ಹಕ್ಕಿನ ಗೀತೆ

ಮಿಲನ

ಹೀನಾ ಮೀನಾ ಕವಿತ ಸವಿತ ಎಲ್ಲರೂ ಬನ್ನಿ
ನಿಮ್ಮ ನಮ್ಮ ಸಮಸ್ಯೆಗಳ ತಿಳಿಸೋಣ ಬನ್ನಿ
ನಮ್ಮ ಈ ಮಿಲನದಲಿ ಎಚ್.ಐ.ವಿ. ಸೋಂಕಿತ
ಮಹಿಳೆಯ ಮೇಲಿನ ದೌರ್ಜನ್ಯ ತಡೆಯಲು ಬನ್ನಿ

1. ತಾರತಮ್ಯ ಏತಕೆ ಬೇಕು, ದೌರ್ಜನ್ಯ ಏಕಿರಬೇಕು
ನಾವೆಲ್ಲ ಐಕ್ಯವಾಗುವ, ಒಂದಾಗಿ ಹೋರಾಡುವ
ಏನೆಲ್ಲ ಅಡೆತಡೆ ಬಂದರು ಮುಂದೆ ಹೋಗುವ

2. ಸದಸ್ಯರೆಲ್ಲ ಒಂದುಗೂಡಿ ಮುಂದೆ ಬನ್ನಿ
ಅಕ್ಕ ತಂಗಿ ಅಣ್ಣ ತಮ್ಮ ನೀವೂ ಬನ್ನಿ
ನಾವೆಲ್ಲ ಒಟ್ಟಿಗೆ ಬಂದು ಎಚ್.ಐ.ವಿ. ಸೋಂಕಿದ
ಮಹಿಳೆಯ ಮೇಲಿನ ದೌರ್ಜನ್ಯ ತಡೆಯಲು ಬನ್ನಿ
ಹೀನಾ ಮೀನಾ ಕವಿತ ಸವಿತ.....

3. ಹೊಡೆತ ಬಡೆತ ಹಿಂಸೆಗಳಿಂದ
ಸಮಾಜದಲ್ಲಿನ ಶೋಷಣೆಯಿಂದ
ನಮ್ಮಯ ಹಕ್ಕುಗಳನ್ನು ಹೋರಾಡಿ ಪಡೆದುಕೊಳ್ಳುವ
ಅದಕ್ಕಾಗಿ ಮಹಿಳೆಯರೆಲ್ಲಾ ಜಾಗೃತರಾಗಿ (2)

4. ಸದಸ್ಯರೆಲ್ಲ ಒಟ್ಟಾಗಿ ಸೇರೋಣ ಬನ್ನಿ
ಒಂದು ಗೂಡಿ ಹಕ್ಕುಗಳನ್ನು ಪಡೆಯೋಣ ಬನ್ನಿ
ಸ್ನೇಹಿತರೆಲ್ಲ ಒಟ್ಟಾಗಿ ಸೇರೋಣ ಬನ್ನಿ ಒಂದು ಗೂಡಿ
ಹಕ್ಕುಗಳನ್ನು ಪಡೆಯೋಣ ಬನ್ನಿ
ನಮ್ಮ ಈ ಒಗ್ಗಟ್ಟು ಗುರಿಯನ್ನು ಮುಟ್ಟಲು ಒಂದಾಗಿ
ಹೋರಾಟ ಮಾಡುವ ಬನ್ನಿ ॥ 2 ॥

## 8. ಒಂದು ಗೀಗಿ ಪದ

ಗ್ಯಾರಂಟಿ ರಾಮಣ್ಣ

ಕುಂತ ನಿಂತ ಸಭಾದಾಗ, ಕೂಡಿದಂತ ಮಂದ್ಯಾಗ
ಕೈ ಮುಗಿದು ಹೇಳತೀನಿ ಕೇಳಿರಣ್ಣೋ
ಮತ್ತೆ ಒಂದು ಹೇಳತೀನಿ ಹುಟ್ಟಿದಂತ ಮಂದಿಗೆಲ್ಲ
ಆರೋಗ್ಯ ಭಾಗ್ಯ ಇದ ತಿಳಿಯಿರಣ್ಣ

ಗೀಯಗಾ.. ಗಾಗಿಯ ಗೀಯ .. ಗೀಯಗಾ .... ಗಾಗಿಯ ಗೀಯ
ಗೀಯಗಾ.. ಗಾಗಿಯಗಾ...ಗೀಯಗೀಯಗ...
ಕುಡಿಯಲು ನಮಗೆ ನೀರಿರಬೇಕು
ಸೇವಿಸಲು ಶುದ್ಧ ಗಾಳಿಯು ಬೇಕು
ಇರಲಿಕ್ಕೆ ಮನೆ ಬೇಕು, ಹೊಟ್ಟೆ ತುಂಬ ಅನ್ನ ಬೇಕು
ಇಲ್ಲದಿದ್ರೆ ನಾವ್ಯಾಕೆ ಬದುಕಬೇಕು ॥ಗೀಯಗಾ..॥

ಮನೆ ಮುಂದೆ ನೀನು ಮಾಡ್ತೀಯ ತಿಪ್ಪೆ
ಸೊಳ್ಳೆಯು ಸೇರ್ತಾವೆ ತಿಳಿಕೊಳ್ಳೊ ಬೆಪ್ಪೆ
ಆ ಸೊಳ್ಳೆ ಕಡಿತೈತೆ ಮಲೇರಿಯಾ ಬರುತ್ತೈತೆ
ಮುಂದಿನ ಊರಿಗೆ ಕಳುಸುತ್ತೈತೆ ॥ಗೀಯಗಾ..॥

ಊರ ಮುಂದೆ ಬೋರ್ ಒಂದೈತೆ
ಒತ್ತಿ ಒತ್ತಿ ಅದು ಮರುದೋಗೈತೆ
ಮಾಡ್ಸೋರು ಮೊದಲಿಲ್ಲ ಕೇಳೋರು ದಿಕ್ಕಿಲ್ಲ
ಕೆರೆ ನೀರ ಕುಡುಯೋದು ತಪ್ಪಲಿಲ್ಲ ॥ಗೀಯಗಾ..॥

ಚಂದ್ರಣ್ಣನ ಮಗುವಿಗೆ ಚಳಿ ಜ್ವರ ಬಂತು
ಮನೆಮಂದಿಗೆಲ್ಲ ಗಾಬರಿಯಾಯ್ತು
ಔಷಧ ಮರೆತುಬಿಟ್ರು, ಐನೋರ ಕರೆಸಿಬಿಟ್ರು
ಮಗು ಸತ್ತೋದ್ ಮೇಲೆ ಕಣ್ ಕಣ್ ಬಿಟ್ರು ॥ಗೀಯಗಾ..॥

ಕಾಯಿಲೆ ಬಂದಾಗ ಕಣ್ಮುಚ್ಚಬೇಡಿ
ಔಷಧ ಕೊಡಿಸೋದ ನೀವ್ ಮರಿಬ್ಯಾಡಿ
ಕಂಡೋರ ಮಾತ್ಕೇಳಿ ಕಣ್ಣೀರ ಹಾಕ್ಬೇಡಿ
ಬದುಕುವವರ ಜೀವಂತ ಸುಡಬೇಡಿ ॥ಗೀಯಗಾ..॥

## 9. ಹಾಕ್ಸಮ್ಮ ಲಸಿಕೆಯಾ

ಗ್ಯಾರಂಟಿ ರಾಮಣ್ಣ

ಹಾಕ್ಸಮ್ಮ ಲಸಿಕೆಯಾ ಮುದ್ದಾದ ಮಗುವಿಗೆ
ಅಂದಾದ ಚೆಂದಾದ ಮುದ್ದಾದ ಮಗುವಿಗೆ
ಹಾಕ್ಸಮ್ಮ ಲಸಿಕೆಯಾ

ಹುಟ್ಟಿದ ವಾರದೊಳಗೆ
ಬಿಸಿಜಿ ಹಾಕ್ಸದಿದ್ರೆ
ಬಾಲಕ್ಷಯ ಬರ್ತೈತೆ ಕಂದಮ್ಮ ನರಳ್ತೈತೆ
ಹಾಕ್ಸಮ್ಮ ಲಸಿಕೆಯಾ ॥

ಮೂರ್ತಿಂಗ್ಳು ತುಂಬೊದ್ರೊಳ್ಗೆ
ಹಾಕ್ಸಮ್ಮ ಡಿಪಿಟಿ
ಗಂಟಲ್ಮಾರಿ ನಾಯ್ಕೆಮ್ಮು ರೋಗಾವಾ ತಡೆಯಾಲು
ಹಾಕ್ಸಮ್ಮ ಲಸಿಕೆಯಾ ॥

ಆರ್ ತಿಂಗ್ಳು ತುಂಬಿದಂತಾ
ಊರ್‌ತುಂಬಾ ತೋರುಸ್ತೀಯಾ
ನಿನ್ಕಂದ ಹೆಳವ ಆಗಾದೆ ಇರಲು
ಹಾಕ್ಸಮ್ಮ ಪೋಲಿಯೋ ॥

ನವಮಾಸ ತುಂಬಿದಾಗ
ಹರುಷಾದಿ ನಗುತೀಯಾ
ದಡಾರ ರೋಗವು ಬರದಂತೆ ಇರಲು
ಹಾಕ್ಸಮ್ಮ ಮೀಸಲ್ಸ್ ॥
ತಾಯಿಂದ ಮಗುವಿಗೆ
ಎಚ್.ಐ.ವಿ. ಬರದಂತೆ
ಪಿ.ಪಿ.ಟಿ. ಸಿ.ಟಿ. ಕೇಂದ್ರಕ್ಕೆ ಒಮ್ಮೆ ಭೇಟಿ ಕೊಟ್ಟು
ನೀನು ತಿಳಿಕೋಮ್ಮ ಮಾಹಿತಿಯನ್ನ॥

## 10. ಆರೋಗ್ಯ ನಿನ್ನದೋ

ಆರೋಗ್ಯ ನಿನ್ನದೋ ... ನಿನ್ನದೇ ನೋಡಿಕೋ
ನೋಡಿಕೊ ಕಳೆಯದಂತೆ ಆರೋಗ್ಯ ಸಂಪತ್ತು
ಐಸ....ಐಸ....ಐಸ...ಐಸ...

ಅಂಗಾಂಗ ತುದ್ದತೆಗೆ ಆದ್ಯತೆ ಕೊಡಬೇಕು
ಆದ್ಯತೆ ಕೊಡಬೇಕು (2)
ಸೇರದಂತೆ ರೋಗಾಣು ಒಳ ಬಟ್ಟೆ ಇರಬೇಕು
ಬಿಸಿಲಲ್ಲಿ ಒಣಹಾಕಿ ಮಡಿ ಮಾಡಿ ಕೊಡಬೇಕು
ಸೋಂಕು ದೂರ, ಇದರಿಂದ ಮಹಿಳೆಗೆ ಆನಂದ (2)

ಊರಲಿದ್ರೆ ಕೆರೆ ಕುಂಟೆ ನೀರಿಗೆ ಬರವಿಲ್ಲ (2)
ಎಲ್ಲಾ ಕೆಲಸ ಅಲ್ಲೆ ಆದ್ರೆ ಕಾಲರಕ್ಕೆ ತಡೆಯಿಲ್ಲ
ಬಯಲಿಲ್ಲಿ ಮಲ ಮೂತ್ರ ಮಾಡುವುದು ಸರಿಯಲ್ಲ
ನೊಣದಿಂದ ರೋಗಾಣು ಹರಡುವುದು ಊರಲೆಲ್ಲ
ಐಸ....ಐಸ....ಐಸ...ಐಸ...

ಮದುವೆಯ ಆಗಬೇಕು 20ರ ನಂತರ
ಮಕ್ಕಳನ್ನು ಹೆರುವಾಗ ಇರಬೇಕು ಅಂತರ
ಹೆಣ್ಣುಮಗು ಒಂದಿದ್ರೆ ಗಂಡು ಮಗು ಇನ್ನೇಕೆ
ಮಗುವೊಂದು ಸಾಕಲ್ಲಾ ವಂಶವನ್ನು ಬೆಳಗೋಕೆ
ಐಸ....ಐಸ....ಐಸ...ಐಸ...

ಲಸಿಕೆಯದು ಮಕ್ಕಳಿಗೆ ರಕ್ಷಣೆಯ ಹೊದಿಕೆ (2)
ತಪ್ಪಿದರೆ ರೋಗಕ್ಕೆ ಆಗುವುದು ವೇದಿಕೆ (2)
ಗರ್ಭಿಣಿ ಆರೋಗ್ಯ ಬಲು ಮುಖ್ಯ ನೋಡಿ
ತರಕಾರಿ ಹಣ್ಣು, ಸೊಪ್ಪು ದಿನನಿತ್ಯ ನೀಡಿ
ಐಸ....ಐಸ....ಐಸ...ಐಸ...

ಆರೋಗ್ಯ ಸೇವೆಯನ್ನು ಪಡೆಯೋಣ ನಾವರಿತು (2)
ಅರಿವನ್ನು ಸಾರೋಣ ಜನರಲ್ಲಿ ನಾವ್ ಬೆರೆತು (2)
ಬದುಕಲಿಕ್ಕೆ ನೆಲ ನೀರು ಗಾಳಿಯದು ಮುಖ್ಯ
ಸಂತುಷ್ಟ ಆಹಾರ ವ್ಯಾಯಾಮ ಮುಖ್ಯ
ಐಸ....ಐಸ....ಐಸ...ಐಸ...

## 11. ಎಚ್.ಐ.ವಿ. ಅರಿವಿನ ಗೀತೆ

ಮಿಲನ

ಸ್ನೇಹಿತರೆ ನಿಮಗೆ ಸ್ವಾಗತ, ನಮ್ಮದೆಯ ಆದರದ ಸ್ವಾಗತ
ನೀವು ನಾವು ಒಂದು ಗೂಡಿ ಚರ್ಚಿಸುವ ಎಚ್.ಐ.ವಿ
ವಿಷಯಗಳನ್ನು – ಸ್ನೇಹಿತರೆ ನಿಮಗೆ ಸ್ವಾಗತ

ಎಚ್.ಐ.ವಿ. ವಿಷಯ ಒಂದು ವಿಷಮವಾಗಿದೆ
ತಿಳುವಳಿಕೆ ಪಡೆದು ನಾವು ಮುಂದೆ ಹೋಗುವ
ನಾವೆಲ್ಲಾ ಸೇರಿ ಮಾಡೋ ಪ್ರಯತ್ನ ಇದೊಂದು
ತಮ್ಮೆಲ್ಲರ ಸಹಾಕಾರ ಬಯುಸುವೆವೆಂದು
ನೀವು ನಾವು ಒಂದುಗೂಡಿ ನೊಂದವರ ಬಾಳಿಗೆ ಬೆಳಕು ತರೋಣ ॥ ಪ ॥

ಸೇರೋಣ ನಾವು ಒಂದು ಕೂಟವಾಗಿ
ಚರ್ಚಿಸುವ, ತಿಳಿಸುವ ಅದರ ಒಳಿತು ಕೆಡುಕುಗಳನ್ನ
ನಮ್ಮ ಮನೋಧೈರ್ಯಗಳನ್ನು ಸಾದಿಸುವ ಸಾಮರ್ಥ್ಯನಿಂದ ಗುರಿಯನ್ನು
ನೀವು ನಾವು ಒಂದು ಗೂಡಿ ನಮ್ಮ ಈ ಸಂಘಟನೆ ಮುಂದುವರಿಸುವ ॥ ಪ ॥

## 12. ಮುಟ್ಟು ಮೈಲಿಗೆ ಅಲ್ಲ

ಕಂಪಾಲಿ ತಿಪ್ಪೇಸ್ವಾಮಿ

ಹೆಣ್ಣು ಜೀವವೊಂದು ಹುಟ್ಟಿದ ಮ್ಯಾಲ
ಮುಟ್ಟಾಗಲೇಬೇಕಾ
ಸ್ವಚ್ಛತೆ ಇಲ್ಲದೆ ಇದ್ದರೆ ಆಗಲೆ
ಹತ್ತುವುದು ಸೋಂಕ

ಮುಟ್ಟಿನ ಕಾಲದ ಬಟ್ಟೆಗಳ, ಸ್ವಚ್ಛ ಇಡಬೇಕು
ಬಿಸಿಲಲಿ ಒಣಗಿಸಿ ಇಡಬೇಕ
ಒಂದೇ ದಿನದಲಿ ಬಾರಿ ಬಾರಿಗೂ
ಬದಲು ಮಾಡಬೇಕ
ಇದು ಆರೋಗ್ಯದ ಮಾತ ॥ಪ॥

ಮುಟ್ಟಾದವರ ಹಟ್ಟಿಯ ಹೊರಗೆ
ಇಡುವುದು ಯಾತಕ್ಕ?
ಹೊರೆಗಡೆ
ಇಡುವುದು ಬಲು ತಪ್ಪ
ಪ್ರೀತಿ ಮಾತು ಬೇಕ, ಅವರಲಿ
ಪ್ರೀತಿ ತೋರಬಕ ॥2॥ ॥ಪ॥

ಮುಟ್ಟು ಎಂಬುದು ಮೈಲಿಗೆಯಲ್ಲ
ಸೃಷ್ಟಿ ಸಹಜ ನೋಡ ॥2॥
ಮುಟ್ಟಾಗಿದ್ದರು ಮಾನವಳವಳು
ಸಹಜವಾಗಿ ನೋಡ
ನೀನು ಸಹಜವಾಗಿ ನೋಡ. ॥ಪ॥

## 13. ಮುತ್ತಿನಂತ ಮಾತೊಂದು

ಮುತ್ತಿನಂಥ ಮಾತೊಂದು ಗೊತ್ತೇನಮ್ಮ ನಿನಗೆ ಗೊತ್ತೇನಪ್ಪ
ನಾವು ಕಾಲಕ್ಕೆ ತಕ್ಕಂತೆ ನಡೆಯಬೇಕು
ಇಂದು ಕಾಲಕ್ಕೆ ತಕ್ಕಂತೆ ನಡ್ಕೋಬೇಕು

1. ಪೆಸ್ಸಿ ಕೋಲ ಫ್ಯಾಂಟ ಲಿಮ್ಕ ಆರೋಗ್ಯಕ್ಕೆ ಹಾನಿಕರ (2)
ಓಹೋ ಇವುಗಳನ್ನೆಲ್ಲ ಕುಡಿಯುವುದರಿಂದ ಏನಾಗುತ್ತೆ (2)
ಹಲ್ಲು ಮೂಳೆಗಳೆಲ್ಲಾ ಸೌದೋಗುತ್ತೆ
ಬದಲಾಗಿ ಮಜ್ಜಿಗೆ, ಪಾನಕ, ಎಳನೀರು ಕುಡೀರಿ ದೇಹ ತಂಪಾಗಿರಿಸಿ
|| ಮುತ್ತಿನಂಥ ಮೂತೊಂದು ಗೋತ್ತೇನಮ್ಮ ||

2. ಪಾನು ಪರಾಗು ಜರ್ದಾ ಬೀಡ ಆರೋಗ್ಯಕ್ಕೆ ಹಾನಿಕರ (2)
ಓಹೊ ಇವುಗಳನ್ನು ಹಾಕೋದ್ರಿಂದ ಏನಾಗುತ್ತೆ (2)
ಬಾಯ ಹುಣ್ಣು ಕ್ಯಾನ್ಸರ್ ರೋಗ ಬಂದ್‌ಬಿಡುತ್ತೆ
ಬದಲಾಗಿ ಏಲಕ್ಕಿ ಲವಂಗ ಬಾಯಲ್ಲಿ ಹಾಕಿ
ಬಾಯಿ ಘಂ ಎನ್ನುತ್ತೆ

3. ಬೀರು ಬ್ರಾಂದಿ ಆಲ್ಕೋಹಾಲು ಆರೋಗ್ಯಕ್ಕೆ ಹಾನಿಕರ (2)
ಓಹೋ ಇವುಗಳನ್ನಲ್ಲ ಕುಡಿಯುವುದರಿಂದ ಏನಾಗುತ್ತೆ
ಹೊಟ್ಟೆ ಜಠರವೆಲ್ಲ ಹಾಳಾಗುತ್ತೆ
ಬದಲಾಗಿ ಮಜ್ಜಿಗೆ ಪಾನಕ ಎಳನೀರ್ ಕುಡೀರಿ
ದೇಹ ತಂಪಾಗಿರಿಸಿ.

## 14. ಎಲ್ಲಿಂದ ಬಂದೀರೆಂದು

ಎಲ್ಲಿಂದ ಬಂದೀರೆಂದು ಕೇಳಬಹುದು ನೀವು
ಎಲ್ಲಿಂದ ಬಂದೀರೆಂದು ಕೇಳಬಹುದು ನೀವು

ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು
ಜನರ ನಡುವಿನಿಂದ ಎಂದು ಹೇಳುತ್ತೇವೆ ನಾವು

ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು
ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು

ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು
ತಿರುಗಿ ಮತ್ತೆ ಜನರ ನಡುವೆ ಹೋಗುತ್ತೇವೆ ನಾವು

## ಜನಾರೋಗ್ಯ ಆಂದೋಲನ ಚಳುವಳಿಯ ಗುರಿ

# ಆರೋಗ್ಯಪಾಲನೆಯು ಪ್ರತಿಯೊಬ್ಬರ ಮೂಲಭೂತ ಸಾಂವಿಧಾನಿಕ ಮತ್ತು ಶಾಸನಾತ್ಮಕ ಹಕ್ಕಾಗಬೇಕು

**ಇದರ ಘಟಕಾಂಶಗಳು :**

1. ಆರೋಗ್ಯ ಪಾಲನೆಗೆ ಬೇಕಾದ ಮೂಲ ಸೌಕರ್ಯವುಳ್ಳ ಸುಸಜ್ಜಿತ , ದಕ್ಷತೆಯ, ಗುಣಮಟ್ಟದ ಸೇವೆ ನೀಡುವ ಆರೋಗ್ಯ ವ್ಯವಸ್ಥೆ. ಆ ಆರೋಗ್ಯ ಸೇವೆಯು ಉತ್ತಮ ಗುಣಮಟ್ಟದ್ದಾಗಿದ್ದು ಎಲ್ಲರಿಗೂ (ಸಾರ್ವತ್ರಿಕವಾಗಿ) ಕೈಗೆಟುಕುವ ರೀತಿಯಲ್ಲಿ ಮತ್ತು ಸಮಂಜಸ ರೀತಿಯಲ್ಲಿ ಲಭ್ಯವಿರಬೇಕು.
2. ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸರ್ವರಿಗೂ ಮೂಲಭೂತ ಆರೋಗ್ಯ ಸೇವೆ ಹಾಗೂ ಆರೋಗ್ಯ ಶಿಕ್ಷಣ ಲಭ್ಯವಿರುವಂತೆ ಮಾಡುವ ಪ್ರಾಥಮಿಕ ಆರೋಗ್ಯ ಪಾಲನೆಯ ವ್ಯವಸ್ಥೆ.
3. ಆರೋಗ್ಯ ವ್ಯವಸ್ಥೆ ಗುಣಮಟ್ಟದ ಸೇವೆ ಕೊಡಲು ಪೂರಕವಾದ ಬಜೆಟ್ / ಹಣಕಾಸು.
4. ಆರೋಗ್ಯದ ಹಕ್ಕಿನ ಉಲ್ಲಂಘನೆ ಮಾಡುವ ಮತ್ತು ಸಾರ್ವಜನಿಕ ಆರೋಗ್ಯ ಕ್ಷೇತ್ರವನ್ನು ನುಂಗುತ್ತಿರುವ ಖಾಸಗೀ ವೈದ್ಯಕೀಯ ಕ್ಷೇತ್ರವನ್ನು ನಿಯಂತ್ರಿಸುವ ಕಾಯಿದೆಯೂ ಬೇಕು. ತುರ್ತು ಪರಿಸ್ಥಿತಿಯಲ್ಲಿ ಮೂಲಭೂತ ಆರೋಗ್ಯ ಸೇವೆಗೆ ಖಾಸಗಿಯಲ್ಲೂ ಜನಸಾಮಾನ್ಯರಿಗೆ ಹಕ್ಕಾಗಿ ಸಿಗಬೇಕು.
5. ಕೈಗೆಟುಕುವ ದರದಲ್ಲಿ ಅತ್ಯವಶ್ಯಕ ಔಷಧಿಗಳ ಲಭ್ಯತೆ.
6. ಎಲ್ಲಾ ವೈದ್ಯಕೀಯ ವಿದ್ಯಾರ್ಥಿಗಳಿಗೆ 2 ವರ್ಷದ ಗ್ರಾಮೀಣ ವೈದ್ಯಕೀಯ ಸೇವೆ ಕಡ್ಡಾಯವಾಗಬೇಕು.
7. ರೋಗಿಗಳಿಗೆ ಮಾಹಿತಿ, ರೋಗಿಗಳ ಹಕ್ಕುಗಳನ್ನು ಗೌರವಿಸುವ ಮತ್ತು ರೋಗಿಗಳಿಗಾಗುವ ಅನ್ಯಾಯವನ್ನು / ಕುಂದುಕೊರತೆಗಳನ್ನು ನಿಯಂತ್ರಿಸುವ ಪ್ರಾಧಿಕಾರ / ವ್ಯವಸ್ಥೆ ಇರಬೇಕು.
8. ಸಮುದಾಯದ ಮೇಲ್ವಿಚಾರಣೆ ಮತ್ತು ಸಮುದಾಯದ ಆರೋಗ್ಯ ಯೋಜನೆಗೆ ಮಾನ್ಯತೆ ನೀಡಬೇಕು.
9. ವಿಶೇಷ ಅಗತ್ಯಗಳಿರುವ ಜನಸಮುದಾಯಗಳ (ಮಹಿಳೆಯರು, ಅಂಗವಿಕಲರು, ಮಾನಸಿಕ ರೋಗಿಗಳು, ವೃದ್ಧರು, ಹೆಚ್.ಐ.ವಿ. - ಏಯ್ಡ್ಸ್ ಭಾದಿತರು, ದಲಿತರು, ಇತ್ಯಾದಿ) ಅಗತ್ಯತೆಗಳನ್ನು ಬೇಧಭಾವ – ನಿರ್ಲಕ್ಷ್ಯ ಇಲ್ಲದೇ ಪೂರೈಸುವ ವ್ಯವಸ್ಥೆ.
10. ಈ ನಿಟ್ಟಿನಲ್ಲಿ ಆರೋಗ್ಯ ಪಾಲನೆಯ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಮಾಡಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು.

## ಸರ್ವರಿಗೂ ಆರೋಗ್ಯ - ಇಂದೇ ಸಿಗಲಿ : ಇಂದೇ ಸಿಗಲಿ! - ಇಂದೇ ಸಿಗಲಿ!!